

'5ಜಿ' ತಂತ್ರಜ್ಞಾನದ ಮೂಲಕ ಟೆಲಿ ಟ್ಯಾಟೂ ಸಾಕಾರ

## ಮಿಥ್ಯೆ #3

## '5ಜಿ' ತಂತ್ರಜ್ಞಾನದಿಂದ ಚೀನಾ ಗೂಢಚರ್ಯೆ ನಡೆಸುತ್ತದೆ

ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿದ್ದ ಸಮಯದಲ್ಲಿ ಈ ಸುದ್ದಿ ಹೆಚ್ಚು ಪ್ರಚಲಿತವಾಗಿತ್ತು. ಚೀನಾ ದೇಶದ ಕಂಪನಿಗಳು '5ಜಿ' ನಿಸ್ತಂತು ಸಂವಹನದ ಉಪಕರಣಗಳು ಹಾಗೂ ಟವರ್‌ಗಳ ಮೂಲಕ ನಿರ್ದಿಷ್ಟ ವ್ಯಕ್ತಿ ಅಥವಾ ಸಂಸ್ಥೆಗಳ ಮೇಲೆ ಗೂಢಚರ್ಯೆ ನಡೆಸಬಹುದು. ಆ ಸಮಯದಲ್ಲಿ ಚೀನಾ ದೇಶದ 'ವಾವೇ' ಕಂಪನಿಯು ಪಶ್ಚಿಮ ದೇಶಗಳ ಕಂಪನಿಗಳಿಗೆ '5ಜಿ' ತಂತ್ರಜ್ಞಾನದ ಸಾಧನಸಲಕರಣೆಗಳಲ್ಲಿ ಪ್ರತಿಸ್ಪರ್ಧಿಯಾಗಿತ್ತು. ಆದ್ದರಿಂದ ಬ್ರಿಟನ್ನಿನ ವೊಡಾಫೋನ್ ಸೇರಿದಂತೆ ಕೆಲವು ಕಂಪನಿಗಳು 'ನಮ್ಮ ಗ್ರಾಹಕರ ಮಾಹಿತಿಯ ಸುರಕ್ಷೆಯೇ ನಮಗೆ ಆದ್ಯತೆಯ ವಿಷಯ' ಎಂದು ಘೋಷಿಸಿದ್ದವು. ಟ್ರಂಪ್ ಅವರಂತೂ 'ವಾವೇ' ಕಂಪನಿಯ ಸ್ಮಾರ್ಟ್‌ಫೋನ್‌ಗಳಿಗೆ ಅಮೆರಿಕದಲ್ಲಿ ನಿಷೇಧ ಹೇರಿದ್ದರು. '5ಜಿ' ಸಂಪರ್ಕ ಸೇವೆಗೆ ಅಗತ್ಯವಾದ ಪ್ರಸರಣಾ ಕೇಂದ್ರಗಳು, ಆಂಟೆನಾಗಳು ಹಾಗೂ ಕಂಪ್ಯೂಟರ್ ಸರ್ವರ್‌ಗಳನ್ನು ಸ್ಯಾಮ್‌ಸಂಗ್‌ನಂಥ ಕಂಪನಿಗಳಿಗೆ ನೀಡಿದ್ದರು. ಈ ನಿಷೇಧವು ಅಮೆರಿಕ ಮತ್ತು ಚೀನಾ ನಡುವಣ ವ್ಯಾಪಾರ ಯುದ್ಧದ ಒಂದು ಭಾಗವಾಗಿತ್ತು.

'ಐ.ಒ.ಟಿ' ಸಾಧನಗಳೆಲ್ಲವೂ ಬಹುತೇಕವಾಗಿ ವೈಫೈ ಅಥವಾ ಬ್ಲೂಟೂತ್‌ಗಳ ಮೂಲಕ ಪರಸ್ಪರ ಸಂಪರ್ಕದಲ್ಲಿರುವುದರಿಂದ, '5ಜಿ'ಯಂಥ ಪ್ರತ್ಯೇಕ ಇಂಟರ್‌ನೆಟ್ ಸಂಪರ್ಕ ಅವುಗಳಿಗೆ ಬೇಕಿಲ್ಲ. ಸಾಮಾನ್ಯವಾಗಿ ಮನೆಗಳಲ್ಲಿ ಅಂಥ ಸಾಧನಗಳ ಸಂಖ್ಯೆಯೂ ಹೆಚ್ಚಿರುವುದಿಲ್ಲ. ಹೀಗಾಗಿ '4ಜಿ'ಯಿಂದ '5ಜಿ'ಗೆ ಬದಲಾವಣೆ ಬೇಕಾಗದಿರಬಹುದು.

ಗ್ರಾಹಕರಿಗೆ ಸದ್ಯಕ್ಕೆ '5ಜಿ' ತೀರಾ ಅವಶ್ಯವಿಲ್ಲದಿದ್ದರೂ ಟೆಲಿಕಾಮ್ ಕಂಪನಿಗಳಿಗಂತೂ ಇದು ಬೇಕು. ಭಾರತದಲ್ಲಿ '5ಜಿ' ಸ್ಪೆಕ್ಟ್ರಮ್‌ನ ಹರಾಜು ಇಷ್ಟು ಹೊತ್ತಿಗೆ ನಡೆಯಬೇಕಿತ್ತು. ಕೋವಿಡ್19ರ ಪರಿಸ್ಥಿತಿಯಿಂದಾಗಿ 2022ಕ್ಕೆ ಮುಂದೂಡಲಾಗಿದೆ. ಆದ್ದರಿಂದ ಭಾರತದಲ್ಲಿ '5ಜಿ' ಸೇವೆ ಕೊಡಲು ತುದಿಗಾಲ ಮೇಲೆ ನಿಂತಿರುವವರು 2022ರ ಕೊನೆಯರ್ಧ ಭಾಗ ಅಥವಾ 2023ರ ಆರಂಭದ ತನಕ ಕಾಯಬೇಕಾಗಬಹುದು. ಭಾರತದಲ್ಲಿ '5ಜಿ' ಸೇವೆಗಾಗಿ ಪ್ರೀಮಿಯಂ ಶುಲ್ಕ ಪಡೆಯಬಹುದೆಂಬ ನಿರೀಕ್ಷೆ ರಿಲಯನ್ಸ್‌ನ ಜಿಯೋಗಿದೆ. 6 ಗೀಗಾಹರ್ಟ್ಸ್‌ಗಿಂತಲೂ ಕಡಿಮೆ ವೇಗದಲ್ಲಿ ಸಾಮಾನ್ಯ '5ಜಿ' ಸೇವೆ ಹಾಗೂ 24ರಿಂದ 26 ಗೀಗಾಹರ್ಟ್ಸ್ ವೇಗದ ಪ್ರೀಮಿಯಂ '5ಜಿ' ಸೇವೆ ನೀಡುವ ಯೋಜನೆ ಜಿಯೋ ಕಂಪನಿಯದು. ಉಳಿದಂತೆ ಏರ್‌ಟೆಲ್ ಮತ್ತು ವೊಡಾಫೋನ್ ಕಂಪನಿಗಳು 6 ಗೀಗಾಹರ್ಟ್ಸ್‌ಗಿಂತಲೂ ಕಡಿಮೆ ವೇಗದಲ್ಲಿನ ಸಾಮಾನ್ಯ '5ಜಿ' ಸೇವೆಗಳಿಗೆ ಸೀಮಿತವಾಗಲಿವೆ.

ಎಲ್ಲ '5ಜಿ' ಗ್ರಾಹಕರಿಗೂ ಸೇವೆ ತೃಪ್ತಿಕರವೆನಿಸಿಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಇದೇ ವರ್ಷ ದಕ್ಷಿಣ ಕೊರಿಯಾದ '5ಜಿ' ಗ್ರಾಹಕರಲ್ಲಿ 5 ಲಕ್ಷ ಮಂದಿ ಕಳಪೆ ಸೇವೆಯ ಕಾರಣ ಹೇಳಿ, '4ಜಿ' ಸಂಪರ್ಕ ಸೇವೆಗೆ ಹಿಂದಿರುಗಿದ್ದಾರೆ. 2020ರ ಅಂಕಿ ಅಂಶದಂತೆ ಭಾರತದಲ್ಲಿರುವ '4ಜಿ' ಬಳಕೆದಾರರ ಸಂಖ್ಯೆ 70 ಕೋಟಿ. ಏರ್‌ಟೆಲ್, ವೊಡಾಫೋನ್ ಹಾಗೂ ಬಿ.ಎಸ್.ಎನ್.ಎಲ್. ಬಳಕೆದಾರರಲ್ಲಿ '2ಜಿ' ಹಾಗೂ '3ಜಿ' ಬಳಸುವವರ ಸಂಖ್ಯೆಯೂ ಸಾಕಷ್ಟಿದೆ. ಅವರೆಲ್ಲರನ್ನೂ '4ಜಿ' ಹಂತಕ್ಕೆ ತರುವುದೂ ಕೂಡಾ ಟೆಲಿಕಾಮ್ ಕಂಪನಿಗಳಿಗೆ ಮುಂದಿನ ದಿನಗಳಲ್ಲಿ ದೊಡ್ಡ ಬಿಸಿನೆಸ್ ಆಗಲಿದೆ.

ಸಾರ್ವತ್ರಿಕವಾಗಿ '5ಜಿ' ಸೇವೆ ನೀಡುವುದಕ್ಕಿಂತಲೂ ಅಗತ್ಯವಿರುವಲ್ಲಿ ಖಾಸಗಿಯಾಗಿ ಮಾತ್ರ ಕೊಡುವುದು ಒಳ್ಳೆಯ ಯೋಚನೆಯಾಗಬಹುದು. ಉದಾಹರಣೆಗೆ, ಮಾರುತಿಯಂಥ ದೊಡ್ಡ ಕಾರ್ಖಾನೆ, ಎ.ಐ.ಐ.ಎಂ. ಎಸ್.ನಂಥ ಬೃಹತ್ ಆಸ್ಪತ್ರೆ, ಐ.ಐ.ಟಿ.ಯಂಥ ಮುಂಚೂಣಿ ತಂತ್ರಜ್ಞಾನ ವಿದ್ಯಾಲಯಗಳಲ್ಲಿ '5ಜಿ'ಯನ್ನು ಸಮರ್ಥವಾಗಿ ಬಳಸುವಂಥ ವಿಪುಲ ಅವಕಾಶಗಳಿರುತ್ತವೆ. ಅವುಗಳಿಗೆ '5ಜಿ' ಸೇವೆಯನ್ನು ನೀಡಬಹುದು. ಆದರೆ ಅಷ್ಟು ಕಡಿಮೆ ಸಂಖ್ಯೆಯ ಗ್ರಾಹಕರನ್ನಿಟ್ಟುಕೊಂಡು ಟೆಲಿಕಾಮ್ ಕಂಪನಿಗಳು ಹೆಚ್ಚು ಲಾಭ ಮಾಡಲು ಸಾಧ್ಯವಿಲ್ಲ.

ಸದ್ಯಕ್ಕೆ ಜಾಗತಿಕವಾಗಿ 57 ರಾಷ್ಟ್ರಗಳಲ್ಲಿನ 23 ಕೋಟಿ ಜನರಿಗೆ ಮಾತ್ರ '5ಜಿ' ಸಂಪರ್ಕ ಲಭ್ಯವಿದೆ. ಇವರಲ್ಲಿ ಹೆಚ್ಚಿನವರು ಚೀನಾದಲ್ಲಿದ್ದಾರೆ. ಹಾಗೆಯೇ ಚೀನಾ ಕಂಪನಿಗಳು '5ಜಿ' ಸೇವೆಗೆ ಅಗತ್ಯವಾದ ಸಾಧನಸಲಕರಣೆಗಳ ನಿರ್ಮಾಣದಲ್ಲಿ ಮುಂಚೂಣಿಯಲ್ಲಿದ್ದಾರೆ. ಭಾರತದಂಥ ಬೃಹತ್ '5ಜಿ' ಮಾರುಕಟ್ಟೆಯ ಮೇಲೆ ಚೀನಾ ಸೇರಿದಂತೆ ಅಮೆರಿಕ ಹಾಗೂ ಯುರೋಪ್ ದೇಶಗಳ ಕಂಪನಿಗಳಿಗೆ ಕಣ್ಣು ಬಿದ್ದಿದೆ. ಕೋವಿಡ್19ರ ಆರ್ಥಿಕ ಹೊಡೆತವಿರದಿದ್ದರೆ '5ಜಿ' ಸಂಪರ್ಕದ ಕೆಲಸಗಳು ತ್ವರಿತಗತಿಯಲ್ಲಿ ಸಾಗುತ್ತಿದ್ದವು.

ಪ್ರತಿಕ್ರಿಯಿಸಿ: feedback@sudha.co.in